# ಸಮಾಜ ವಿಜ್ಞಾನ

**ತರಗತಿ : 10 ನೇ ತರಗತಿ** **ಮಾದರಿ ಪ್ರಶ್ನೆ ಪತ್ರಿಕೆ –1** **ಅಂಕಗಳು : 80**

**ವಿಷಯ: ಸಮಾಜ ವಿಜ್ಞಾನ (85K)** **ಸಮಯ : 3–15 ನಿಮಿಷ.**

**I ಬಹು ಆಯ್ಕೆ ಪ್ರಶ್ನೆಗಳು 8*1=8**

1) ಸ್ವತಂತ್ರ ಭಾರತದ ಮೊದಲ ಗವರ್ನರ್ ಜನರಲ್ –
 ಸಿ) **ಮೌಂಟ್ ಬ್ಯಾಟನ್**

2) ಮೈಸೂರು ಲ್ಯಾನ್ಸರ್ಸ್‌ಗಳ ಮುಖ್ಯಸ್ಥರು –
 **ಬಿ) ಬಿ. ಚಾಮರಾಜ ಅರಸು.**

3) ರಾಷ್ಟ್ರೀಯ ಸಾಕ್ಷರತಾ ಮಿಷನ್ ಉದ್ದೇಶ –
 **ಡಿ) ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡಲು ಜಾರಿಗೆ ತಂದಿದೆ.**

4) ಕೇಂದ್ರ ಸರಕಾರ ಸಮಾನ ವೇತನ ಕಾಯ್ದೆಯನ್ನು ಜಾರಿಗೆ ತಂದ ವರ್ಷ – ಎ) **1976**.

5) ದೇಶದಲ್ಲಿ ಅತಿ ಹೆಚ್ಚು ಚಿನ್ನ ಉತ್ಪಾದನೆ ಗಣಿ – **ಡಿ) ಹಟ್ಟಿ.**

6) ಜಗತ್ತಿನ ಅತಿ ಎತ್ತರದ ರಸ್ತೆಮಾರ್ಗ–**ಬಿ) ಕುಲುಮನಾಲಿ–ಲ್ವೇ**

7) ನೀತಿ ಆಯೋಗದ ದಿನವಹಿ ಆಡಳಿತವನ್ನು ನೆರವೇರಿಸುವವರು–ಸಿ) **ನೀತಿ ಆಯೋಗದ ಉಪಾಧ್ಯಕ್ಷರು**

8) ಉದ್ಯಮಿ ಎಂಬ ಪದವು ಫ್ರೆಂಚ್ ಭಾಷೆಯ ಈ ಪದದಿಂದ ಬಂದಿದೆ – **ಎ) ಎಂಟ್ರ ಪ್ರೆಂಡೆ.**

**II ಒಂದು ವಾಕ್ಯದಲ್ಲಿ ಉತ್ತರಿಸಿರಿ. 8*1=08**

**9) ಸಂವಿಧಾನದ 42ನೇ ತಿದ್ದುಪಡಿ ಅತ್ಯಂತ ಮಹತ್ವದ್ದಾಗಿದೆ.ಏಕೆ?**
 **ಉತ್ತರ:** ಸಂವಿಧಾನಕ್ಕೆ ಜಾತ್ಯತೀತ ಮತ್ತು ಸಮಾಜವಾದಿ ಎಂಬ ಅಂಶಗಳನ್ನು ಸೇರಿಸಿತು.

**10) ಹಿಟ್ಲರನು ಗೋಬೆಲ್ಸ್ ಎಂಬ ಮಂತ್ರಿಯನ್ನು ಏಕೆ ನೇಮಕ ಮಾಡಿದ್ದನು?**
 **ಉತ್ತರ:** ಜನಾಂಗೀಯ ದ್ವೇಷ ಪ್ರಸಾರ ಮಾಡಲು.

11) ಚೀನಾ ಈಗಲೂ ಭಾರತದ ಈ ರಾಜ್ಯವನ್ನು ತನ್ನದೆಂದು ಪ್ರತಿಪಾದಿಸುತ್ತದೆ
 **ಉತ್ತರ: ಅರುಣಾಚಲ ಪ್ರದೇಶ.**

**12) ಹೆಣ್ಣು ಭ್ರೂಣಹತ್ಯೆ ಎಂದರೇನು?**
 **ಉತ್ತರ:** ಗರ್ಭದಲ್ಲಿರುವ ಹೆಣ್ಣು ಭ್ರೂಣವನ್ನು ಗರ್ಭದಲ್ಲಿಯೇ ಕೊಂದು ಹಾಕುವುದು.

13) ಮಕ್ಕಳನ್ನು ದುಡಿಮೆಗೆ ತೊಡಗಿಸುವುದು ಕಾನೂನು ಬಾಹಿರವೆಂದು ಹೇಳುವ ಸಂವಿಧಾನದ ವಿಧಿ ತಿಳಿಸಿರಿ.
 **ಉತ್ತರ: 24 ನೇ ವಿಧಿ.**

**14) ಬಂಗಾಳಕೊಲ್ಲಿಯಲ್ಲಿ ಹೆಚ್ಚಾಗಿ ಚಂಡಮಾರುತಗಳು ಉಂಟಾಗಲು ಕಾರಣವೇನು?**
 **ಉತ್ತರ:** ಭೂಮಿ ಮತ್ತು ಸಾಗರ ಭಾಗಗಳ ನಡುವಿನ ಉಷ್ಣಾಂಶ ಹಾಗೂ ಒತ್ತಡದಲ್ಲಿ ತೀವ್ರ ವ್ಯತ್ಯಾಸ.

**15) ವಿದೇಶಿ ಸಾಲ ಎಂದರೇನು?**
 **ಉತ್ತರ:** ವಿದೇಶಿ ಪ್ರಜೆಗಳು, ವಿದೇಶಿ ಹಣಕಾಸು ಸಂಸ್ಥೆಗಳು, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳಿಂದ ಪಡೆಯುವ ಸಾಲ.

**16) ಭಾರತೀಯ ರಿಸರ್ವ್ ಬ್ಯಾಂಕ್‌ನ್ನು ಬ್ಯಾಂಕುಗಳ ಬ್ಯಾಂಕ್ ಎಂದು ಕರೆಯುತ್ತಾರೆ. ಏಕೆ?**
 **ಉತ್ತರ:** ದೇಶದ ಬ್ಯಾಂಕುಗಳ ಎಲ್ಲಾ ಚಟುವಟಿಕೆಗಳನ್ನು ರಿಸರ್ವ್ ಬ್ಯಾಂಕ್ ನಿಯಂತ್ರಿಸುವುದರಿಂದ ಕರೆಯುತ್ತಾರೆ.

**III ಮೂರು–ನಾಲ್ಕು ವಾಕ್ಯದಲ್ಲಿ ಉತ್ತರಿಸಿರಿ 8*2=16**

**17) ಭಾರತದ ಇತಿಹಾಸದಲ್ಲಿ 19ನೆಯ ಶತಮಾನವನ್ನು ಪುನರುಜ್ಜೀವನದ ಕಾಲವೆಂದು ಕರೆಯುವರು. ಏಕೆ?**

- ಭಾರತೀಯರಿಗೆ ಪಾಶ್ಚಾತ್ಯ ನಾಗರೀಕತೆಯ ಸಂಪರ್ಕ.
- ಇಂಗ್ಲೀಷ ವಿದ್ಯಾಭ್ಯಾಸದ ಸೌಲಭ್ಯ.
- ವೈಚಾರಿಕ ಮನೋಭಾವ ಬೆಳವಣಿಗೆ.
- ಮೂಢನಂಬಿಕೆ ಪ್ರಶ್ನಿಸುವ ಭಾವನೆ.
- ವಿರೋಧಾಭಾಸ ಹಾಗೂ ಸ್ವಹಿತಾಸಕ್ತಿ ಅರಿವು.
- ಪ್ರಜಾಪ್ರಭುತ್ವ, ಸ್ವಾತಂತ್ರದ ಪರಿಕಲ್ಪನೆ.
- ಶೈಕ್ಷಣಿಕ ಜಾಗೃತಿ ಉಂಟಾಯಿತು

**18) 1858ರ ಬ್ರಿಟನ್ ರಾಣಿಯ ಘೋಷಣೆಯಲ್ಲಿದ್ದ ಅಂಶಗಳಾವುವು?**

- ದೇಶೀಯ ರಾಜರೊಂದಿಗಿನ ಒಪ್ಪಂದಗಳ ಅಂಗೀಕಾರ.
- ಪ್ರಾದೇಶಿಕ ವಿಸ್ತರಣೆ ಆಪೇಕ್ಷೆ ಕೈಬಿಡುವುದು.
- ಭಾರತೀಯರಿಗೆ ಸುಭದ್ರ ಸರಕಾರ ಭರವಸೆ.
- ಕಾನೂನಿನ ಮುಂದೆ ಸಮಾನತೆ.
- ಭಾರತೀಯರ ಧಾರ್ಮಿಕ ವಿಷಯದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ.
- ಭಾರತೀಯ ಬೆಂಬಲಕ್ಕೆ ಒತ್ತು.
- ಧಾರ್ಮಿಕ ಸಹಿಷ್ಣುತಾ ನೀತಿ.

**19) ಪ್ರಾದೇಶಿಕವಾದವು ದೇಶದ ಐಕ್ಯತೆಗೆ ಮಾರಕ. ಹೇಗೆ?**

- ದೇಶದ ಏಕತೆ ಹಾಗೂ ಹಿತಾಸಕ್ತಿಗೆ ಧಕ್ಕೆ.
- ಅಂತರ್ ರಾಜ್ಯ ಗಡಿ ಸಮಸ್ಯೆ.
- ನದಿ ನೀರಿನ ಹಂಚಿಕೆ ವಿವಾದ.
- ಅತಿಯಾದ ಭಾಷಾಭಿಮಾನ.
- ಸಂಕುಚಿತ ಮನೋಭಾವ.
- ಪ್ರಾದೇಶಕವಾದ ವೈಭವಿಕರಣ.
- ದೇಶದ ಅಭಿವೃದ್ಧಿಗೆ ಮಾರಕ.

**ಅಥವಾ**

**ಭಯೋತ್ಪಾದನೆಯು ಕಾನೂನುಬಾಹಿರ ಹಾಗೂ ಸಮಾಜ ದ್ರೋಹಿ ಕೃತ್ಯ. ಸಮರ್ಥಿಸಿ.**

- ಅಪಾರ ಜೀವ – ಸೊತ್ತು ನಾಶ.
- ಮಾನಸಿಕ ವೇದನೆ.
- ಭಯದ ವಾತಾವರಣ ಸೃಷ್ಠಿ.
- ಸಮಾಜಿಕ ಸಂಸ್ಕೃತಿಗೆ, ಸರಕಾರಕ್ಕೆ ಧಕ್ಕೆ
- ಹಿಂಸಾ ಕೃತ್ಯಗಳು.
- ಕಾನೂನು ಬಾಹಿರ, ಸಮಾಜದ್ರೋಹಿ ಕ್ರಮ.
- ಸರ್ಕಾರಿ ಕಚೇರಿ, ಜನಜಂಗುಳಿ ಪ್ರದೇಶ ಧ್ವಂಸ.
- ವಿಷಕಾರಿ ಬಾಂಬು, ಅನಿಲಗಳ ಬಳಕೆ.

**20) ಸಾಮಾಜಿಕ ಸ್ಥರವಿನ್ಯಾಸ ಹೇಗೆ ಉಂಟಾಗಿದೆ?**

- ಜಾತಿಪದ್ಧತಿ. •ಉದ್ಯೋಗ. •ಆಹಾರ ಪದ್ದತಿ.
- ಬಡವ–ಬಲ್ಲಿದ. •ಬುದ್ದಿಶಕ್ತಿ. •ಬಣ್ಣ.
- ಶಿಕ್ಷಣ. •ಲಿಂಗ. •ಆದಾಯ.

**ಅಥವಾ**

**ಪರಿಸರ ರಕ್ಷಣೆಗಾಗಿ ನಡೆದ ಸಾಮೂಹಿಕ ಪ್ರತಿಭಟನೆಗಳನ್ನು ಪಟ್ಟಿಮಾಡಿ.**

- ಚಿಪ್ಕೋ ಚಳುವಳಿ.
- ಅಪ್ಪಿಕೋ ಚಳುವಳಿ.
- ನರ್ಮದಾ ಆಂದೋಲನ.
- ಮೌನ ಕಣಿವೆ ಆಂದೋಲನ.
- ಕರ್ನಾಟಕ ಕರಾವಳಿ ತೀರದ ವಿವಿಧ ಸ್ಥಾವರಗಳ ವಿರೋಧಿ ಚಳುವಳಿ.
- ಕೈಗಾ ವಿರೋಧಿ ಚಳುವಳಿ.

**21) ಭಾರತದ ವಾಯುಗುಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?**

- ಅಕ್ಷಾಂಶ.
- ಸಮುದ್ರ ಮಟ್ಟದಿಂದ ಇರುವ ದೂರ.
- ಸಾಗರಗಳಿಂದ ಇರುವ ದೂರ.
- ಮಾರುತಗಳ ದಿಕ್ಕು.
- ಪರ್ವತ ಸರಣಿಗಳು ಹಬ್ಬಿರುವ ರೀತಿ.
- ಸಾಗರ ಪ್ರವಾಹಗಳು.

**22) ಮಳೆ ಕೊಯ್ಲಿನ ನೀರನ್ನು ಸಂಗ್ರಹಿಸುವ ವಿಧಾನಗಳಾವುವು?**

- ಮನೆಯ ಮೇಲ್ಛಾವಣಿ ಮೇಲಿನ ನೀರಿನ ಸಂಗ್ರಹಣೆ.
- ಕೃಷಿ ಹೊಂಡ ತೊಡಿ ನೀರಿನ ಸಂಗ್ರಹಣೆ.
- ಮಳೆ ನೀರು ಭೂಮಿಯಲ್ಲಿ ಇಂಗುವಂತೆ ಮಾಡುವುದು.
- ಹರಿಯುವ ನೀರಿಗೆ ಅಡ್ಡಗಟ್ಟೆ ನಿರ್ಮಿಸಿ, ಹೊಂಡ ಕೆರೆಗಳ ರೂಪದಲ್ಲಿ ಸಂಗ್ರಹ.

**23) ಗ್ರಾಮೀಣ ಉದ್ಯೋಗ ನಿರ್ಮಾಣ ಹಾಗೂ ಬಡತನ ನಿರ್ಮೂಲನ ಯೋಜನೆಗಳನ್ನು ತಿಳಿಸಿರಿ.**

- ಮಹಾತ್ಮಾಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ
- ಸ್ವರ್ಣಜಯಂತಿ ಗ್ರಾಮ ಸ್ವ–ಉದ್ಯೋಗ ಯೋಜನೆ.

**24) ಗ್ರಾಹಕರು ಅನುಭವಿಸುತ್ತಿರುವ ಸಂಕಷ್ಟಗಳೇನು?**

- ಬೆಲೆಗಳಲ್ಲಿ ಮೋಸ.
- ತೂಕ & ಅಳತೆಗಳಲ್ಲಿ ಮೋಸ.
- ಕಲಬೆರಕೆ ವಸ್ತುಗಳ ಮಾರಾಟ.
- ಕೃತಕ ಅಭಾವ ಸೃಷ್ಟಿ.
- ಲಾಭಗಳಿಕೆಗಾಗಿ ಗ್ರಾಹಕರ ಶೋಷಣೆ.

**IV ಐದು–ಆರು ವಾಕ್ಯದಲ್ಲಿ ಉತ್ತರಿಸಿರಿ. 9*3=27**

**25) ಭಾರತಕ್ಕೆ ಹೊಸ ಜಲಮಾರ್ಗ ಕಂಡು ಹಿಡಿಯಲು ಯುರೋಪಿಯನ್ನರನ್ನು ಪ್ರೇರೆಪಿಸಿದ ಅಂಶಗಳಾವುವು?**

- ಟರ್ಕರಿಂದ ಕಾನ್‌ಸ್ಟಾಂಟಿನೋಪಲ್ ವಶ.
- ಭೂಮಾರ್ಗದ ಮುಚ್ಚುವಿಕೆ.
- ಯುರೋಪಿನ ರಾಜರಿಂದ ನಾವಿಕರಿಗೆ ಪ್ರೋತ್ಸಾಹ.
- ಇಟಲಿಯ ಏಕಸ್ವಾಮ್ಯ ಮುರಿಯುವ ಪ್ರಯತ್ನ.
- ದಿಕ್ಸೂಚಿ, ಆಸ್ಟ್ರೋಲೋಬ್, ಸಿಡಿಮದ್ದು ಆವಿಷ್ಕಾರ.
- ಟರ್ಕರ ಅಧಿಕ ತೆರಿಗೆ ಭಾರ.
- ಸಮುದ್ರಯಾನಕ್ಕೆ ಯುರೋಪಿನ ದೇಶಗಳ ಉತ್ತೇಜನ.

**ಅಥವಾ**

**ಮೊದಲನೇ ಆಂಗ್ಲೋ – ಮರಾಠ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳೇನು?**

➢ **ಕಾರಣಗಳು**

- ಮರಾಠರಿಂದ ಷಾ ಆಲಂನನ್ನು ದೆಹಲಿ ಸಿಂಹಾಸನದಲ್ಲಿ ಮರುಸ್ಥಾಪನೆ.
- ಷಾ ಆಲಂ ಕೋರ & ಅಲಹಾಬಾದ್ ಮರಾಠರಿಗೆ ನೀಡಿದನು.
- ಮರಾಠ ಮತ್ತು ಬ್ರಿಟಿಷರ ನಡುವಿನ ವೈರತ್ವ.
- ಪೇಶ್ವೆ ಸ್ಥಾನಕ್ಕೆ ಏರ್ಪಟ್ಟ ಕಲಹ.

➢ **ಪರಿಣಾಮಗಳು**

- ಅಹಮದಾಬಾದ್ ಬ್ರಿಟಿಷರ ವಶ.
- ಸಾಲ್ಬಾಯ್ ಒಪ್ಪಂದದಿಂದ ಯುದ್ಧ ಮುಕ್ತಾಯ.
- 2ನೇ ಮಾಧವರಾವ್ ಪೇಶ್ವೆಯಾಗಿ ನೇಮಕ.
- ಮರಾಠರಿಗೆ ಹಿನ್ನಡೆ.

**26) ಚಿಕ್ಕದೇವರಾಜ ಒಡೆಯರು ಸಮರ್ಥ ಯೋಧರು ಹಾಗೂ ಆಡಳಿತಗಾರರೂ ಆಗಿದ್ದರು ಎಂದು ಹೇಗೆ ಹೇಳುವಿರಿ?**

- ಶಿವಾಜಿಯ ಸೇನೆ ಹಿಮ್ಮೆಟ್ಟಿಸಿದರು.
- ಮಾಗಡಿ, ಮಧುಗಿರಿ, ಕೊರಟಗೆರೆ ಪ್ರಾಂತಗಳ ವಶ.
- ಕರ್ನಾಟಕ ಚಕ್ರವರ್ತಿ, ನವಕೋಟಿ ನಾರಾಯಣ ಬಿರುದು.
- ಆಡಳಿತ ನೆರವಿಗೆ ಅಠಾರ ಕಛೇರಿ ಸ್ಥಾಪನೆ.
- ಚಿಕ್ಕದೇವರಾಜ, ದೊಡ್ಡದೇವರಾಜ ನಾಲೆ ನಿರ್ಮಾಣ.
- ಕವಿ ಮತ್ತು ಪಂಡಿತರಿಗೆ ಆಶ್ರಯ.
- ಅಂಚೆ ವ್ಯವಸ್ಥೆ ಜಾರಿ.
- ನೀರಾವರಿ ಸೌಲಭ್ಯ.

**27) ಸ್ವಾತಂತ್ರ್ಯ ಕಾಲದ ಉದಾರ ರಾಷ್ಟ್ರವಾದದ ಕಾಲ ವಿವರಿಸಿರಿ.**

- ಕಾಂಗ್ರೆಸ್‌ನ ಆರಂಭದ 20ವರ್ಷ ಮಂದಗಾಮಿಗಳ ಯುಗ ಎನ್ನುವರು.
- ಇವರದು ಉದಾರ ರಾಷ್ಟ್ರವಾದದ ಕಾಲ.
- ಬ್ರಿಟಿಷ್ ಆಳ್ವಿಕೆ ಮತ್ತು ನ್ಯಾಯಪರತೆಯಲ್ಲಿ ನಂಬಿಕೆ.

- ಸುರೇಂದ್ರನಾಥ್ ಬ್ಯಾನರ್ಜಿ, ಎಂ ಜಿ ರಾನಡೆ, ದಾದಾಬಾಯಿ ನವರೋಜಿ, ಗೋಪಾಲಕೃಷ್ಣ ಗೋಖಲೆ ಪ್ರಮುಖ ನಾಯಕರು.
- ಸಂವಿಧಾನಿಕ ಚೌಕಟ್ಟಿನಲ್ಲಿ ಪ್ರಾರ್ಥನೆ ಮತ್ತು ಮನವಿ.
- ಜನರಿಗೆ ರಾಜಕೀಯ ಶಿಕ್ಷಣ ನೀಡುವ ಪ್ರಯತ್ನ.
- ದೇಶದ ಕೈಗಾರಿಕೆಗಳ ಅಭಿವೃದ್ಧಿ.
- ಸೈನಿಕ ವೆಚ್ಚ ಕಡಿತ ಮಾಡುವುದು.
- ಉತ್ತಮ ಶಿಕ್ಷಣಕ್ಕೆ ಒತ್ತಾಯ.
- ಬಡತನ ಅಧ್ಯಯನಕ್ಕೆ ಒತ್ತಾಯ.
- ಸಂಪತ್ತಿನ ಸೋರಿಕೆ ಸಿದ್ಧಾಂತ ಮಂಡನೆ.

**28) ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ರಚನೆ& ಕಾರ್ಯ ಪಟ್ಟಿಮಾಡಿ**

❖ **ರಚನೆ.**

- ಎಲ್ಲಾ ಸದಸ್ಯ ರಾಷ್ಟ್ರಗಳ ಪ್ರತಿನಿಧಿಗಳನ್ನೊಳಗೊಂಡ ಅಂಗಸಂಸ್ಥೆ.
- ಪ್ರತಿ ಸದಸ್ಯ ರಾಷ್ಟ್ರ 5 ಸದಸ್ಯರನ್ನು ಕಳುಹಿಸುತ್ತದೆ.
- ಪ್ರತಿ ಸದಸ್ಯ ರಾಷ್ಟ್ರಕ್ಕೆ ಒಂದೇ ಮತದ ಹಕ್ಕಿದೆ.
- ಒಬ್ಬ ಅಧ್ಯಕ್ಷ, 17 ಉಪಾಧ್ಯಕ್ಷರನ್ನು ಹೊಂದಿದೆ.
- 7 ಸ್ಥಾಯಿ ಸಮಿತಿಗೆ ಆಧ್ಯಕ್ಷರ ನೇಮಕ ಮಾಡುತ್ತದೆ.

❖ **<u>ಕಾರ್ಯಗಳು</u>**

- ಸೆಪ್ಟಂಬರ್‌ನಿಂದ ಡಿಸೆಂಬರ್ ಮಧ್ಯದವರೆಗೆ ಅಧೀವೇಶನ ಜರಗುತ್ತದೆ.
- ವಾರ್ಷಿಕ ಆಯವ್ಯಯಕ್ಕೆ ಅನುಮೋದನೆ ನೀಡುತ್ತದೆ.
- ಪ್ರಮುಖ ನಿರ್ಧಾರಕ್ಕೆ 2/3 ಸದಸ್ಯರ ಒಪ್ಪಿಗೆ ಅವಶ್ಯಕ.
- ಜಾಗತಿಕ ಸಂಸತ್ತಾಗಿ ಕಾರ್ಯ ನಿರ್ವಹಣೆ.
- ತುರ್ತು ವಿಷಯಕ್ಕೆ ವಿಶೇಷ ಅಧಿವೇಶನ ಕರೆಯಬಹುದು.

**29) ನಿರುದ್ಯೋಗಕ್ಕೆ ಕಾರಣಗಳನ್ನು ತಿಳಿಸಿರಿ.**

- ಅಧಿಕ ಜನಸಂಖ್ಯೆ..
- ಯಾಂತ್ರೀಕರಣ.
- ಶ್ರಮವಿಭಜನೆ.
- ಸಾಮಾಜಿಕ ಅಸಮಾನತೆ.
- ಬಂಡವಾಳ ಕೊರತೆ.
- ಅನಕ್ಷರತೆ.

**30) ಹಿಮಾಲಯದ ಪ್ರಾಮುಖ್ಯತೆ ವಿವರಿಸಿರಿ.**

- ರಕ್ಷಣಾ ಕವಚ.
- ಶೀತಗಾಳಿ ತಡೆ.
- ನದಿಗಳ ಉಗಮಸ್ಥಾನ.
- ಜಲವಿದ್ಯುಚ್ಛಕ್ತಿ ಉತ್ಪಾದನೆ.
- ವಿಶಾಲ ಮೈದಾನಗಳು.
- ಸಸ್ಯ & ಪ್ರಾಣಿ ಸಂಕುಲಗಳ ಆಶ್ರಯತಾಣ.
- ಖನಿಜ ಸಂಪನ್ಮೂಲಗಳ ಆಗರ.
- ಪ್ರವಾಸೋದ್ದಿಮೆ ಹಾಗೂ ಧಾರ್ಮಿಕ ಕೇಂದ್ರ.

**31) ಮ್ಯಾಂಗ್ರೋವ್ ಮತ್ತು ಮರಭೂಮಿ ಅರಣ್ಯಗಳ ನಡುವಿನ ವ್ಯತ್ಯಾಸ ಪಟ್ಟಿಮಾಡಿರಿ.**

| ಮ್ಯಾಂಗ್ರೋವ್ ಅರಣ್ಯ | ಮರಭೂಮಿ ಅರಣ್ಯ |
|---|---|
| • ನದಿ ಮುಖಜ ಭೂಮಿಗಳಲ್ಲಿ ಹರಡಿವೆ.<br>• ನದಿ ಅಳಿವೆ ತಗ್ಗು ಪ್ರದೇಶದಲ್ಲಿ ಹಬ್ಬಿವೆ.<br>• 4.4 ಸಾವಿರ ಚ.ಕಿ.ಮೀ. ಪ್ರದೇಶದಲ್ಲಿ ಹಂಚಿಕೆ.<br>• ಗಂಗಾ ನದಿಯ ಮುಖಜಭೂಮಿ ಪ್ರದೇಶವನ್ನು ಸುಂದರಬನ್ ಎನ್ನುವರು. | •50 ಸೆಂ.ಮೀ. ಕಡಿಮೆ ಮಳೆ ಪ್ರದೇಶದಲ್ಲಿ ಹರಡಿವೆ<br>•ಥಾರ್ ಮರಭೂಮಿ,ಅದರ ಅಂಚಿನ ಪ್ರದೇಶದಲ್ಲಿ ಹಬ್ಬಿವೆ.<br>•ಆಳವಾದ ಬೇರುಗಳು.<br>•ಕುರುಚಲ ಜಾತಿಯ ಸಸ್ಯಗಳು.<br>•ಮುಳ್ಳು ಕಂಟಿ ಕಂಡುಬರುತ್ತವೆ. |

**ಅಥವಾ**

**ಭಾರತದ ಆರ್ಥಿಕ ಅಭಿವೃದ್ಧಿಯನ್ನು ಕೃಷಿಯು ನಿರ್ಧರಿಸುತ್ತದೆ. ಸಮರ್ಥಿಸಿರಿ.**

- ಭಾರತೀಯರ ಮುಖ್ಯ ಉದ್ಯೋಗ.
- ಆಹಾರ ಧಾನ್ಯ ಪೂರೈಕೆ.
- ಜೀವನಾಧಾರ ಉದ್ಯೋಗ.
- ಉದ್ಯೋಗಾವಕಾಶ ನೀಡಿದೆ.
- ಕೈಗಾರಿಕೆಗಳಿಗೆ ಕಚ್ಚಾ ವಸ್ತು ಪೂರೈಕೆ.
- ಕೈಗಾರಿಕೆ ಪೋಷಣೆ.
- ತೃತೀಯ ಆರ್ಥಿಕ ಉದ್ಯೋಗ ಪೋಷಣೆ.

**32) ಭಾರತದಲ್ಲಿ ಗ್ರಾಮೀಣ ಆರ್ಥಿಕ ಸ್ಥಿತಿಗತಿ ಹೇಗಿದೆ?**

- ಬಡತನ.
- ಗುಡಿ ಕೈಗಾರಿಕೆ ನಾಶ.
- ನಿರುದ್ಯೋಗ.
- ಅನಾರೋಗ್ಯ.
- ಅನಕ್ಷರತೆ.
- ಮೂಲಭೂತ ಸೌಕರ್ಯಗಳ ಕೊರತೆ
- ನಗರ ವಲಸೆ.
- ಹಳ್ಳಿ–ನಗರಗಳ ಅಂತರ ಹೆಚ್ಚಳ.
- ನಗರ ವಿಸ್ತರಣೆ
- ಕೈಗಾರಿಕೆ & ಸೇವಾ ವಲಯ.

**ಅಥವಾ**

**ಭಾರತದಂತಹ ಮುಂದುವರೆಯುತ್ತಿರುವ ದೇಶಗಳಲ್ಲಿ ಕಂಡುಬರುವ ಸಮಸ್ಯೆಗಳಾವುವು?**

- ನಿರುದ್ಯೋಗ.
- ಬಡತನ.
- ಸಾರಿಗೆ.
- ಸಂಪರ್ಕ.
- ವಿದ್ಯುತ್.
- ಶಿಕ್ಷಣ.
- ಆರೋಗ್ಯ
- ಕೃಷಿಯ ಹಿಂದುಳಿಯುವಿಕೆ.
- ಆದಾಯ ಮತ್ತು ಸಂಪತ್ತಿನ ಅಸಮಾನ ಹಂಚಿಕೆ

**33) ಬ್ಯಾಂಕುಗಳ ಗುಣಲಕ್ಷಣಗಳನ್ನು ತಿಳಿಸಿರಿ.**

- ಹಣದ ವಹಿವಾಟು.
- ವ್ಯಕ್ತಿ/ಸಂಸ್ಥೆ/ಕಂಪನಿ.
- ಠೇವಣಿ ಅಂಗೀಕಾರ.
- ಸಾಲ ಕೊಡುವುದು.
- ಏಜೆಂಟ್.
- ಲಾಭ& ಸೇವಾ ಭಾವನೆ.
- ಹೆಸರಿನ ಗುರುತು.
- ಬ್ಯಾಂಕಿಂಗ್ ವ್ಯವಹಾರ.

**34) ಉದ್ಯಮಗಳ ಅಭಿವೃದ್ಧಿಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರಗಳ ಪಾತ್ರವನ್ನು ವಿವರಿಸಿರಿ.**

- ಉದ್ದಿಮೆ ಸ್ಥಾಪಿಸಲು ಯೋಜನಾ ವರದಿ ತಯಾರಿ.
- ಯಂತ್ರಗಳು ಮತ್ತು ಸಾಧನ ಸಲಕರಣೆಗಳ ಬಗ್ಗೆ ಮಾಹಿತಿ.
- ಹೊಸದಾಗಿ ಕೈಗಾರಿಕಾ ಪ್ರದೇಶಗಳ ರಚನೆ.
- ವಿಶ್ೇಷ ಯೋಜನಾ ವರದಿ ಅಂಗೀಕಾರ.
- ಕಚ್ಛಾಪದಾರ್ಥಗಳ ಹಂಚಿಕೆ.
- ಹಣಕಾಸಿನ ನೆರವು.
- ಕೇಂದ್ರ ಸರ್ಕಾರದ ಜೊತೆ ಮಾರುಕಟ್ಟೆ ಸಹಾಯ.
- ಉದ್ದಿಮೆ ಆಧುನಿಕರಿಸಲು ಸಹಾಯ.
- ವಸ್ತುಗಳನ್ನು ರಫ್ತು ಮಾಡಲು ಸಹಾಯ.
- ವಸ್ತುಗಳ ತಯಾರಿಕೆಯಲ್ಲಿ ಸಹಾಯ.

**V ಎಂಟು–ಹತ್ತು ವಾಕ್ಯದಲ್ಲಿ ಉತ್ತರಿಸಿರಿ. 4*4=16**

**34) ಮೂರನೇ ಕಾರ್ನಾಟಿಕ್ ಯುದ್ಧಕ್ಕೆ ಕಾರಣ ಮತ್ತು ಪರಿಣಾಮಗಳೇನು ?**

➢ **ಕಾರಣಗಳು**

- ಲಾಲಿಯಿಂದ ವಾಂಡಿವಾಷ್ ಕೋಟೆ ಮುತ್ತಿಗೆ.
- ಸರ್.ಐರ್‌ಕೂಟನಿಂದ ಫ್ರೆಂಚರು ಸೋತರು.

➢ **ಪರಿಣಾಮಗಳು.**

- ಬುಸ್ಸಿಯ ಸೆರೆ.
- ಲಾಲಿ ಪಾಂಡಿಚೇರಿಯಲ್ಲಿ ತಲೆಮರಿಸಿಕೊಂಡನು.
- ಭಾರತದಲ್ಲಿ ಪ್ರೆಂಚರು ತಮ್ಮ ನೆಲೆ ಕಳೆದುಕೊಂಡರು.
- ಲಾಲಿ ಬ್ರಿಟಿಷ್‌ರಿಗೆ ಶರಣಾದನು.
- ಪಾಂಡಿಚೇರಿ ಬ್ರಿಟಿಷರಿಗೆ ಹಿಂದಿರುಗಿಸಲಾಯಿತು.
- ದಕ್ಷಿಣ ಭಾರತ ಗೆಲ್ಲುವಲ್ಲಿ ಬ್ರಿಟಿಷರು ಮಗ್ನರಾದರು.

**35) ಭಾರತದ ಆಧುನಿಕ ಶಿಕ್ಷಣ ಕ್ಷೇತ್ರಕ್ಕೆ ಬ್ರಿಟಿಷರ ಕೊಡುಗೆಗಳೇನು?**

- ವಾರನ್ ಹೇಸ್ಟಿಂಗ್ಸ್‌ನಿಂದ ಆಧುನಿಕ ಶಿಕ್ಷಣ ಪ್ರಸಾರಕ್ಕೆ ಉತ್ತೇಜನ.
- ಹೇಸ್ಟಿಂಗ್ಸ್‌ನಿಂದ ಕಲ್ಕತ್ತಾದಲ್ಲಿ ಮದರಸಾ ಸ್ಥಾಪನೆ.
- ಜೊನಾಥನ್ ಡಂಕನ್‌ನಿಂದ ಬನಾರಸ್ಸಿನಲ್ಲಿ ಸಂಸ್ಕೃತ ಕಾಲೇಜು ಆರಂಭ.
- ಚಾರ್ಲ್ಸ್ ಗ್ರಾಂಟ್‌ನಿಂದ ಇಂಗ್ಲಿಷ್ ಶಿಕ್ಷಣ ವಿಸ್ತರಣೆಗೆ ಒತ್ತಾಯ.
- ಬೆಂಟಿಕ್‌ನಿಂದ ಬ್ರಿಟಿಷ್ ಶಿಕ್ಷಣ ವಿಸ್ತರಣೆಗೆ ಪ್ರೋತ್ಸಾಹ.
- ಮೆಕಾಲೆ ವರದಿ ಆಧುನಿಕ ಭಾರತದ ಶಿಕ್ಷಣಕ್ಕೆ ತಳಹದಿ.
- ಚಾರ್ಲ್ಸ್ ವುಡನ ವರದಿಯಂತೆ ವಿಶ್ವವಿದ್ಯಾಲಯಗಳ ಸ್ಥಾಪನೆ.

**ಅಥವಾ**

**ಖಾಯಂ ಜಮೀನ್ದಾರಿ ಪದ್ದತಿಯು ರೈತರನ್ನು ಸಾಲದಲ್ಲೇ ಹುಟ್ಟಿ, ಸಾಲದಲ್ಲೇ ಬದುಕಿ, ಸಾಲದಲ್ಲೇ ಸಾಯುವಂತೆ ಮಾಡಿತು. ಹೇಗೆ?**

- ಜಮೀನ್ದಾರರು ಭೂಮಾಲೀಕರಾದರು.
- ಜಮೀನ್ದಾರರು ಮತ್ತು ಬ್ರಿಟಿಷರಿಗೆ ಅಧಿಕ ಲಾಭ.
- ರೈತರಿಂದ ಅಧಿಕ ತೆರಿಗೆ ವಸೂಲಿ.
- ರೈತರು, ರೈತ ಕೂಲಿಕಾರ್ಮಿಕರು ನಿರುದ್ಯೋಗಿಗಳಾದರು.
- ರೈತರು ಬಹುಮುಖ ಶೋಷಣೆಗೆ ಒಳಗಾದರು.
- ರೈತರ ಬದುಕು ಅತಂತ್ರವಾಯಿತು.
- ಬರಗಾಲ ಸಮಯದಲ್ಲಿ ತೆರಿಗೆ ಸಲ್ಲಿಸದಿದ್ದರೆ, ಭೂಮಿ ಒಡೆತನ ಕಸಿದುಕೊಳ್ಳಲಾಗುತ್ತಿತ್ತು.

**36) ದೇಶದ ಆಂತರಿಕ ಸಮಸ್ಯೆಯಾದ ಕೋಮುವಾದ ನಿವಾರಣಾ ಕ್ರಮಗಳಾವುವು?**

- ಏಕನಾಗರಿಕ ಕಾನೂನು ಸಂಹಿತೆ.
- ಜಾತ್ಯತೀತ ಮನೋಭಾವ.
- ಮೇಲುಸ್ತರದ ರಾಷ್ಟ್ರೀಯ ಚಿಂತನೆಗಳು.
- ಸಾಮಾಜಿಕ ಏಕತೆ.
- ಸಾರ್ವಜನಿಕ ಎಚ್ಚರ.
- ರಾಜಕೀಯ ಅಚಲ ನಿರ್ಧಾರ.
- ಆಡಳಿತಾತ್ಮಕ ಸಮತೋಲನ.
- ಉತ್ತಮ ಕಾನೂನು ವ್ಯವಸ್ಥೆ.
- ಸದೃಢ ರಾಷ್ಟ್ರೀಯ ಮನೋಭಾವ.
- ಆರೋಗ್ಯಕರ ಪೂರಕ ಸುದ್ದಿ ಮಾಧ್ಯಮ.

**37) ಮಣ್ಣಿನ ಸವೆತದ ಪರಿಣಾಮಗಳಾವುವು?**

- ಪ್ರವಾಹ ಸಂಭವ.
- ನದಿ ಪಾತ್ರ ಬದಲಾವಣೆ.
- ಮಣ್ಣಿನ ಫಲವತ್ತತೆ ನಾಶ.
- ಕೆರೆ, ಜಲಾಶಯದಲ್ಲಿ ಹೂಳು ತುಂಬುತ್ತದೆ.
- ನೀರಿನ ಸಂಗ್ರಹಣಾ ಸಾಮರ್ಥ್ಯ ಕಡಿಮೆ.
- ಇಂಗುವ ನೀರಿನ ಪ್ರಮಾಣ ಕಡಿಮೆ.
- ಸ್ವಾಭಾವಿಕ ಚಿಲುಮೆ ಬತ್ತುತ್ತವೆ.
- ವ್ಯವಸಾಯಕ್ಕೆ ಹಿನ್ನಡೆ.

**VI 38) ಭಾರತದ ಅಂದವಾದ ನಕ್ಷೆ ಬಿಡಿಸಿ ಎ. ಹಟ್ಟಿ ಚಿನ್ನದ ಗಣಿ ಬಿ. ಕೊಚ್ಚಿ ಸಿ. ಭದ್ರಾವತಿ ಡಿ. ಕಲ್ಪಕಂ ಗುರುತಿಸಿರಿ 1+4=5**

